# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 1551 |
| ಉತ್ತರಿಸಬೇಕಾದ ದಿನಾಂಕ | : | 11.03.2022 |
| ಸದಸ್ಯರ ಹೆಸರು | : | **ಶ್ರೀ ಪ್ರಕಾಶ್ ರಾಥೋಡ್ (ನಾಮನಿರ್ದೇಶನ ಹೊಂದಿದವರು)** |
| ಉತ್ತರಿಸುವ ಸಚಿವರು | : | ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ | Reply |
|---|---|---|---|
| ಅ) | ವಿಜಯಪುರ ಜಿಲ್ಲೆಯ ಜಿಲ್ಲಾ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಟ್ರ್ಯಾಕ್ ನಿರ್ಮಾಣ ಮಾಡಲಾಗಿದೆಯೇ; | ವಿಜಯಪುರ ಜಿಲ್ಲೆಯ ಜಿಲ್ಲಾ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಟ್ರ್ಯಾಕ್ ಅಳವಡಿಸಲಾಗಿದೆ. | The synthetic track has been installed at the District Stadium in Vijayapur district. |
| ಆ) | ಸಿಂಥೆಟಿಕ್ ಟ್ರ್ಯಾಕ್ ನಿರ್ಮಾಣ ಮಾಡಲು ತಗಲಿರುವ ವೆಚ್ಚವೆಷ್ಟು; ಯಾವಾಗ ನಿರ್ಮಾಣ ಮಾಡಲಾಗಿದೆ ಹಾಗೂ ಯಾವಾಗ ಕಾಮಗಾರಿ ಪೂರ್ಣಗೊಂಡಿದೆ; | ಸಿಂಥೆಟಿಕ್ ಟ್ರ್ಯಾಕ್ ಅಳವಡಿಸಲು ತಗಲಿರುವ ವೆಚ್ಚ ರೂ.6,06,96,648/-ಗಳಾಗಿದೆ. ಆಯುಕ್ತರು, ಮಹಾನಗರ ಪಾಲಿಕೆ, ವಿಜಯಪುರ ಇವರ ಮೂಲಕ ಟೆಂಡರ್ ಆಧಾರದ ಮೇಲೆ ಮೆ: ದಿ. ಗ್ರೇಟ್ ಸ್ಪೋರ್ಟ್ಸ್ ಹೈದ್ರಾಬಾದ್ ಇವರಿಗೆ ವಹಿಸಿ, ದಿನಾಂಕ: 25-04-2019 ರಂದು ಪ್ರಾರಂಭಿಸಿ ಫೆಬ್ರುವರಿ-2021ರ ಮಾಹೆಯಲ್ಲಿ ಪೂರ್ಣಗೊಳಿಸಲಾಗಿದೆ.<br>ಆದರೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಇಲ್ಲಿಯವರೆಗೂ ಹಸ್ತಾಂತರವಾಗಿರುವುದಿಲ್ಲ. | An amount of Rs.6,06,96,648/- has been spent for laying of Synthetic Track. Tender was awarded to M/s The Great Sports, Hyderabad through Commissioner, Town Municipality, Vijayapura. The work started on 25-04-2019 and completed on February-2021.<br>But, this work has not been handed over to Youth Empowerment & Sports Department so far. |

| | | | |
|---|---|---|---|
| ಇ) | ಸಿಂಥೆಟಿಕ್ ಟ್ರ್ಯಾಕ್ ಹದಗೆಟ್ಟಿದ್ದು ಅಥ್ಲೆಟಿಕ್ಸ್‌ಗಳಿಗೆ ಇದರಿಂದ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಿಜಯಪುರ ಸಿಂಥೆಟಿಕ್ ಟ್ರ್ಯಾಕ್ ಸುಸ್ಥಿತಿಯಲ್ಲಿದೆ. ಸಿಂಥೆಟಿಕ್ ಮೈದಾನದ ಟ್ರೀಪಲ್ ಚೇಸ್ ಪಿಟ್‌ನ ಅಕ್ಕಪಕ್ಕದಲ್ಲಿರುವ ಪೋಲ್ ವಾಲ್ಟ್ ಅಲ್ಯುಮಿನಿಯಂ ಡಕ್ಕನ್ ಮೇಲೆ ಹಾಕಿರುವ ಸಿಂಥೆಟಿಕ್ ಎರಡು ಕಡೆ ಕಿತ್ತುಬಂದಿರುತ್ತದೆ. | Synthetic Athletic Track in Vijayapur district Stadium is in good condition.<br><br>The synthetic material on the pole vault aluminium duck, adjacent to the treeple chase pit in the synthetic track, has been torn off on two sides. |
| ಈ) | ಕಳಪೆ ಕಾಮಗಾರಿ ಮಾಡಿದವರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು? | ಸಿಂಥೆಟಿಕ್ ಟ್ರ್ಯಾಕ್ ಮೈದಾನದಲ್ಲಿ ಕಂಡುಬಂದ ನ್ಯೂನತೆಗಳ ಕುರಿತು ಸಂಬಂಧಪಟ್ಟವರ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆ ಆಯುಕ್ತರು, ಮಹಾನಗರ ಪಾಲಿಕೆ, ವಿಜಯಪುರ ಜಿಲ್ಲೆ ಇವರಿಗೆ ಸೂಚಿಸಲಾಗಿದೆ. | The Commissioner, Vijayapur City Corporation have been requested to take appropriate action against those concerned for the defects found in the synthetic track. |

ವೈಎಸ್ ಡಿ-ಇಬಿಬಿ/47/2022

(ಡಾ. ನಾರಾಯಣಗೌಡ)
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು